ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ಶಾ.ಸ.ಶಾ–01/ವಿ.ಮಂ.ಅ/2020/01/2019–20. ದಿನಾಂಕ:15–09–2020.

*: ಸು ತ್ತೋ ಲೆ :*

**ವಿಷಯ**:– ದಿನಾಂಕ: 21–09–2020 ರಿಂದ 30–09–2020 ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನ ಸಮಯದಲ್ಲಿ ಬರುವ ಪ್ರಶ್ನೆಗಳಿಗೆ ನಿಗದಿತ ಅವಧಿಯಲ್ಲಿ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ:–1. ವಿಧಾನ ಸಭೆ ಕಾರ್ಯದರ್ಶಿಯವರ ಪತ್ರ ಸಂಖ್ಯೆ: ಕವಿಸಸ/ಶಾರಶಾ/18/2018–20. ದಿನಾಂಕ: 01.09.2020.

2. ವಿಧಾನ ಪರಿಷತ್ ಕಾರ್ಯದರ್ಶಿಯವರ ಪತ್ರ ಸಂಖ್ಯೆಕವಿಪ/ಶಾರಶಾ/38/141/ಅ/2020. ದಿನಾಂಕ: 02.09.2020.

**********

**ಕರ್ನಾಟಕ ವಿಧಾನ ಮಂಡಲದ ಅಧಿವೇಶನ ಉಲ್ಲೇಖ–01 ಮತ್ತು 02 ರಂತೆ ದಿನಾಂಕ: 21–09–2020 ರಿಂದ 30–09–2020 ರವರೆಗೆ ಬೆಂಗಳೂರಿನಲ್ಲಿ ನಡೆಯುತ್ತದೆ.** ಈ ದಿಶೆಯಲ್ಲಿ ಪ್ರತಿ ದಿನ ಬರುವ ಚುಕ್ಕೆ ಗುರುತಿನ ಪ್ರಶ್ನೆಗಳು, ಚುಕ್ಕೆ ರಹಿತ ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು, ಶೂನ್ಯ ವೇಳೆ ಪ್ರಸ್ತಾಪಗಳು, ವಿವಿಧ ನಿಯಮಗಳ ಅಡಿಯಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಿದ್ಧಪಡಿಸಿ ಸಂಬಂಧಿಸಿದ ನಿರ್ದೇಶಕರ/ಜಂಟಿ ನಿರ್ದೇಶಕರುಗಳ ಮೂಲಕ ಆಯುಕ್ತರ ಅನುಮೋದನೆಯನ್ನು ಪಡೆದು ಜರೂರಾಗಿ ಸರ್ಕಾರಕ್ಕೆ ಸಲ್ಲಿಸಲು ವಹಿಸಬೇಕಾದ ಕೆಳಕಂಡ ಕ್ರಮಗಳನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಹೋಗಲು ಸಂಬಂಧಿಸಿದ ಎಲ್ಲರಿಗೂ ತಿಳಿಸಿದೆ.

| | |
|---|---|
| • | ವಿಧಾನ ಸಭೆ / ಪರಿಷತ್ ಪ್ರಶ್ನೆಗಳನ್ನು / ಗಮನ ಸೆಳೆಯುವ ಸೂಚನೆಗಳನ್ನು ಆಯಾ ಶಾಖೆ / ಕಛೇರಿಯ ಇ–ಮೇಲ್ ಗೆ ಕಳುಹಿಸಲಾಗುತ್ತದೆ. ಸಂಬಂಧಿಸಿದ ಶಾಖಾಧಿಕಾರಿಗಳು ಹಾಗೂ ಅಧೀಕ್ಷಕರುಗಳು ಅವುಗಳನ್ನು ಪಡೆದುಕೊಂಡು ಅತ್ಯಂತ ಜರೂರಾಗಿ ಉತ್ತರಗಳನ್ನು ಸಿದ್ಧಪಡಿಸಲು ಸೂಕ್ತ ಕ್ರಮವಹಿಸುವುದು/ ಮಾರ್ಗದರ್ಶನ ನೀಡುವುದು. ತಪ್ಪಿದಲ್ಲಿ ಅವರುಗಳನ್ನೇ ನೇರವಾಗಿ ಹೊಣೆಗಾರರನ್ನಾಗಿಸಲಾಗುವುದು. ಯಾವುದೇ ಪ್ರಶ್ನೆ / ಗಮನ ಸೆಳೆಯುವ ಸೂಚನೆಗಳನ್ನು ನಿರಾಕರಿಸುವಂತಿಲ್ಲ. ಕ್ರೋಢೀಕರಣ ಮಾಡಲು ತಿಳಿಸಿರುವ ಕಛೇರಿಗಳು / ಶಾಖೆಗಳು ಸಂಬಂಧಿಸಿದವರಿಂದ ಮಾಹಿತಿ ಪಡೆದು ಕ್ರೋಢೀಕೃತ ಉತ್ತರಗಳನ್ನು ಸಿದ್ಧಪಡಿಸಿ ಆಯುಕ್ತರ / ರಾಜ್ಯ ಯೋಜನಾ ನಿರ್ದೇಶಕರ ಅನುಮೋದನೆ ಪಡೆದು ಸದನದಲ್ಲಿ ಸಚಿವರು ಉತ್ತರಿಸಬೇಕಾದ ದಿನಾಂಕಕ್ಕೆ ಎರಡು ದಿನ ಮೊದಲು ಸರ್ಕಾರಕ್ಕೆ ಸಲ್ಲಿಸಲು ಕ್ರಮವಹಿಸುವುದು. |
| • | ಯಾವುದೇ ಪ್ರಶ್ನೆಗಳಿಗೆ / ಸೂಚನೆಗಳಿಗೆ ವಿನಾಕಾರಣ ಕಾಲಾವಕಾಶ ಪಡೆದುಕೊಳ್ಳದಿರಲು ತಿಳಿಸಿದೆ. ತೀರಾ ಅವಶ್ಯಕತೆ ಇರುವ ಸಂದರ್ಭಗಳಲ್ಲಿ ಕಾಲಾವಕಾಶ ಪಡೆದುಕೊಳ್ಳಬೇಕಾದಲ್ಲಿ ಸಂಬಂಧಿಸಿದ ನಿರ್ದೇಶಕರುಗಳ ಅನುಮೋದನೆಯೊಂದಿಗೆ ಕಾಲಾವಕಾಶ ಪಡೆದುಕೊಳ್ಳಲು ತಿಳಿಸಿದೆ. ಹೀಗೆ ಕಾಲಾವಕಾಶ ಪಡೆದುಕೊಂಡ ಪ್ರಶ್ನೆಗಳಿಗೆ ಕಾಲಾವಕಾಶ ಕೋರಿದ ಮಿತಿಯಲ್ಲಿಯೇ ಉತ್ತರಗಳನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳುವುದು ಹಾಗೂ ಈ ವಿವರಗಳನ್ನು ಪ್ರತೀ ಶಾಖೆಯಲ್ಲಿ ಪ್ರತ್ಯೇಕ ವಹಿಯಲ್ಲಿ ದಾಖಲಿಸಿ ನಿರ್ವಹಿಸಲು ತಿಳಿಸಿದೆ. |
| • | ಅಪರ ಆಯುಕ್ತರ ಕಛೇರಿ, ಧಾರವಾಡ/ಕಲ್ಬುರ್ಗಿ ಈ ಕಛೇರಿ ವ್ಯಾಪ್ತಿಗೆ ಮಾತ್ರ ಅನ್ವಯಿಸುವ ಪ್ರಶ್ನೆಗಳಿಗೆ ಸಂಬಂಧಿಸಿದವರು ಉತ್ತರಗಳನ್ನು ನೇರವಾಗಿ ಸರ್ಕಾರಕ್ಕೆ ಸಲ್ಲಿಸಿ adpilalccpi@gmail.com ಗೆ ದೃಢಿಕೃತ ಪ್ರತಿಯನ್ನು ಕಳುಹಿಸಲು ತಿಳಿಸಿದೆ. |
| • | ವಿಧಾನ ಸಭೆ/ಪರಿಷತ್ ಪ್ರಶ್ನೆಗಳಿಗೆ ಜರೂರಾಗಿ ಉತ್ತರವನ್ನು ತಯಾರಿಸಿ ಸಂಬಂಧಿಸಿದ ನಿರ್ದೇಶಕರ/ಜಂಟಿ ನಿರ್ದೇಶಕರುಗಳ ಮೂಲಕ ಆಯುಕ್ತರ ಅನುಮೋದನೆಯನ್ನು ಪಡೆದುಕೊಳ್ಳುವುದು. ನಂತರ ಸದರಿ ಉತ್ತರಗಳನ್ನು ಸರ್ಕಾರಕ್ಕೆ ಸಲ್ಲಿಸುವ ಸಲುವಾಗಿ ದೃಢೀಕೃತ ದ್ವಿ– ಪ್ರತಿಗಳನ್ನು ವಿಧಾನ ಮಂಡಲ ಸಮನ್ವಯ ಶಾಖೆಗೆ ಪೂರಕ ದಾಖಲೆಗಳೊಂದಿಗೆ ತ್ವರಿತವಾಗಿ ಕಳುಹಿಸಿಕೊಡಲು ತಿಳಿಸಿದೆ.ತುರ್ತು ಸಂದರ್ಭಗಳಲ್ಲಿ ಉತ್ತರಗಳನ್ನು ನೇರವಾಗಿ ಸರ್ಕಾರಕ್ಕೆ ಸಲ್ಲಿಸಿ ವಿಧಾನ ಮಂಡಲ ಸಮನ್ವಯ ಶಾಖೆಗೆ ಯಥಾ ಪ್ರತಿಯನ್ನು ನೀಡುವುದು. ದೃಢೀಕೃತ ಉತ್ತರಗಳ ಸಾಫ್ಟ್ ಕಾಪಿಯನ್ನು adpilalccpi@gmail.com ಗೆ ಕಳುಹಿಸಲು ತಿಳಿಸಿದೆ. |

| | |
|---|---|
| • | ಎಸ್.ಎ.ಟಿ.ಎಸ / ಟಿ.ಡಿ.ಎಸ್ / ಹೆಚ್.ಆರ್.ಎಂ.ಎಸ್ ಗಳಲ್ಲಿ ಲಭ್ಯವಿರುವ ಅಂಕಿ–ಅಂಶಗಳನ್ನು ಆಧರಿಸಿ ಉತ್ತರಗಳನ್ನು ತಯಾರಿಸುವ ಪ್ರಕರಣಗಳಲ್ಲಿ ಜಿಲ್ಲೆಗಳಿಂದ ಮಾಹಿತಿ ನಿರೀಕ್ಷಿಸಿ ಉತ್ತರಗಳನ್ನು ತಯಾರಿಸಲು ವಿಳಂಬಿಸುವಂತಿಲ್ಲ. ಸದರಿ ಶಾಖೆಗಳ ಮುಖ್ಯಸ್ಥರು ಈ ಮಾಹಿತಿಯನ್ನು ತಕ್ಷಣ ಸಂಬಂಧಿಸಿದವರಿಗೆ ನೀಡಲು ಕ್ರಮವಹಿಸುವುದು. ಜಿಲ್ಲೆಗಳಿಂದ ಮಾಹಿತಿಯನ್ನು ಪಡೆಯುವ ಪ್ರಕರಣಗಳಲ್ಲಿ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರ ಇಲಾಖಾ ಇ–ಮೇಲ್ ಐಡಿಗಳಿಗೆ ಪ್ರಶ್ನೆಗಳನ್ನು ಕಳುಹಿಸಿ ಉತ್ತರಗಳನ್ನು ಪಡೆದುಕೊಳ್ಳುವುದು. ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರು ಪ್ರಶ್ನೆಯನ್ನು ಸ್ವೀಕರಿಸಿದ ದಿನದಂದೇ ತಮ್ಮ ವ್ಯಾಪ್ತಿಯಲ್ಲಿನ ಮಾಹಿತಿಯನ್ನು ಕ್ರೋಢೀಕರಿಸಿ ದೃಢೀಕೃತ ಉತ್ತರಗಳನ್ನು ಇ–ಮೇಲ್ ಮೂಲಕ ಕಳುಹಿಸುವುದು. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಪ್ರತಿ ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರ ಕಛೇರಿಯಲ್ಲಿನ ಶಿಕ್ಷಣಾಧಿಕಾರಿ ವೃಂದದ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ಕಡ್ಡಾಯವಾಗಿ ನೇಮಿಸುವುದು. |
| • | ಪ್ರತಿ ಸೋಮವಾರ ಮತ್ತು ಗುರುವಾರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳು ಕ್ರಮವಾಗಿ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಗಳಲ್ಲಿ ಬರುತ್ತವೆ. ಇದಕ್ಕೆ ಎರಡು ದಿನಗಳ ಮೊದಲೇ ಉತ್ತರಗಳನ್ನು ಸರ್ಕಾರಕ್ಕೆ ಕಳುಹಿಸುವುದು ಅತ್ಯಾವಶ್ಯಕವಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲು ತಿಳಿಸಿದೆ. ಉತ್ತರಿಸಲು ಬಾಕಿ ಇರುವ ಹಿಂದಿನ ಅಧಿವೇಶನದ ಪ್ರಶ್ನೆಗಳಿಗೆ ಉತ್ತರಗಳನ್ನು ಸಲ್ಲಿಸುವುದು |
| • | ಅಧಿವೇಶನ ಸಮಯದಲ್ಲಿನ ಕಾರ್ಯವಿಧಾನ ಕುರಿತು ಇಲಾಖಾ ಅಂತರ್ಜಾಲ ತಾಣದಲ್ಲಿ (www.schooleducation.kar.nic.in) ಲಭ್ಯವಿರುವ ಈ ಕಛೇರಿ ಸುತ್ತೋಲೆ ಸಂಖ್ಯೆ ವಿ.ಸ.ಪ 01/ಸುತ್ತೋಲೆ 01/2016–17 ದಿನಾಂಕ 01.02.2017 ರಲ್ಲಿರುವ ಅಂಶಗಳನ್ನು ಪಾಲಿಸಲು ತಿಳಿಸಿದೆ. |
| • | ಸಹಾಯಕ ನಿರ್ದೇಶಕರು, ಶಾಸಕಾಂಗ ಸಮನ್ವಯ ಶಾಖೆ, ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರನ್ನು ವಿಧಾನ ಮಂಡಲ ಸಂಪರ್ಕಾಧಿಕಾರಿಯನ್ನಾಗಿ ನೇಮಿಸಿದೆ. ಇವರು ದಿನನಿತ್ಯ ಕಾರ್ಯ ಕಲಾಪಗಳನ್ನು ತರಿಸಿ ಅದಕ್ಕೆ ಉತ್ತರಗಳನ್ನು ಸರ್ಕಾರಕ್ಕೆ ಕಳುಹಿಸಿ ಸಭೆಯ ಕಾರ್ಯಕಲಾಪಗಳ ಬಗ್ಗೆ ಆಯುಕ್ತರಿಗೆ ವರದಿ ಮಾಡಲು ಸೂಚಿಸಿದೆ.<br>**ಇವರ ದೂರವಾಣಿ ಸಂಖ್ಯೆ: 080–22112519 ಇ–ಮೇಲ್ ಐಡಿ–** adpilalccpi@gmail.com |
| • | ವಿಧಾನ ಮಂಡಲದ ಅಧಿವೇಶನದ ಸಮಯದಲ್ಲಿ ಬರುವ ಎಲ್ಲಾ ಪ್ರಶ್ನೆಗಳು ಹಾಗೂ ಕಾಗದ ಪತ್ರಗಳನ್ನು ಪೋಟೋ ಕಾಫಿ ಮಾಡಿಕೊಳ್ಳಲು ಅನುವಾಗುವಂತೆ ಸಂಬಂಧಿಸಿದ ಎಲ್ಲಾ ಶಾಖೆಗಳಲ್ಲಿರುವ / ಕಛೇರಿಗಳಲ್ಲಿರುವ ಪೋಟೋ ಕಾಫಿ ಯಂತ್ರಗಳನ್ನು ಸುಸ್ಥಿತಿಯಲ್ಲಿರಿಸಲು ಸಂಬಂಧಿಸಿದವರಿಗೆ ತಿಳಿಸಿದೆ. ವಿಧಾನ ಮಂಡಲಕ್ಕೆ ಸಂಬಂಧಿಸಿದ ಪತ್ರಗಳ ಪೋಟೋ ಕಾಫಿ ಪ್ರತಿಗಳನ್ನು ಮಾಡಿಕೊಡಲು ಕೋರಿದಾಗ ಕಡ್ಡಾಯವಾಗಿ ಅವರಿಗೆ ಅಗತ್ಯ ಸಹಕಾರ ನೀಡುವುದು. |
| • | ವಿಧಾನ ಮಂಡಲ ಅಧಿವೇಶನ ನಡೆಯುವ ಅವಧಿಯಲ್ಲಿ ಇಲಾಖಾ ಅಧಿಕಾರಿಗಳು ಮತ್ತು ನೌಕರರು ಯಾವುದೇ ರೀತಿಯ ರಜೆಗಳನ್ನು ಪಡೆಯಬಾರದು ಮತ್ತು ಕೇಂದ್ರ ಸ್ಥಾನವನ್ನು ಬಿಡಬಾರದು. ವಿಧಾನ ಮಂಡಲದ ಅಧಿವೇಶನ ನಡೆಯುವ ಸಂದರ್ಭದಲ್ಲಿ ಯಾವುದೇ ಪ್ರವಾಸ/ತಪಾಸಣೆಗೆ ಸಿಬ್ಬಂದಿ ವರ್ಗದವರನ್ನು ಕಳುಹಿಸಬಾರದಾಗಿ ಹಾಗೂ ಕಡ್ಡಾಯವೆನಿಸಿದಲ್ಲಿ ಆಯುಕ್ತರ ಅನುಮತಿ ಪಡೆದು ನಂತರ ನಿಯೋಜಿಸುವುದು. |
| • | ವಿಧಾನ ಮಂಡಲದ ಕಾರ್ಯಕಲಾಪ ನಡೆಯುವ ವೇಳೆಯಲ್ಲಿ ಈ ಕಛೇರಿಯ ಎಲ್ಲಾ ಶಾಖಾಧಿಕಾರಿಗಳು ಮತ್ತು ಅಧೀಕ್ಷಕರು ಸಂಜೆ 8–00 ಗಂಟೆಯವರೆಗೆ ಕಛೇರಿಯಲ್ಲಿ ಕಡ್ಡಾಯವಾಗಿ ಇರತಕ್ಕದ್ದು. ಸಂಬಂಧಿಸಿದ ಶಾಖೆಗಳಲ್ಲಿ ಒಬ್ಬ ಪ್ರಥಮ / ದ್ವಿತೀಯ ದರ್ಜೆ ಸಹಾಯಕರನ್ನು ಇರಲು ಸೂಚಿಸಿದೆ. ಮರು ದಿನದ ಕಾರ್ಯಕಲಾಪಗಳ ಪಟ್ಟಿ ಬಂದ ನಂತರ ಮಾತ್ರ ಸಂಬಂಧಪಟ್ಟ ಸಿಬ್ಬಂಧಿಗಳು ಕಛೇರಿಯನ್ನು ಬಿಡಲು ಸೂಚಿಸಿದೆ. ಹಾಗೂ ಕಛೇರಿ ಬಿಡುವ ಮುನ್ನ ವಿಧಾನ ಮಂಡಲ ಸಮನ್ವಯ ಶಾಖೆಯವರಿಗೆ ಮಾಹಿತಿ ನೀಡುವುದು. |

ಮೇಲ್ಕಂಡ ಎಲ್ಲಾ ವಿಷಯಗಳನ್ನು ಮನದಟ್ಟು ಮಾಡಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಲು ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ತಿಳಿಸಿದೆ. ಈ ನಿರ್ದೇಶನ ವಿಧಾನ ಮಂಡಲ ಅಧಿವೇಶನ ನಡೆಯುವ ಕಾಲದಲ್ಲಿ ಮಾತ್ರ ಅನ್ವಯಿಸುತ್ತದೆ.

16/9/20

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಇವರಿಗೆ:**

***01.*** ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.

***02.*** ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ.

*03.* ನಿರ್ದೇಶಕರು, ಪ್ರಾಥಮಿಕ / ಪ್ರೌಢಶಿಕ್ಷಣ / ಅಲ್ಪ ಸಂಖ್ಯಾತ ಭಾಷಾ ಶಾಲೆಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

*04.* ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ ಬೆಂಗಳೂರು.

*05.* ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋದನೆ ಮತ್ತು ತರಬೇತಿ ಇಲಾಖೆ, ಬನಶಂಕರಿ, ಬೆಂಗಳೂರು.

*06.* ವ್ಯವಸ್ಥಾಪಕ ನಿರ್ದೇಶಕರು, ಪಠ್ಯಪುಸ್ತಕ ಸಂಘ, ಹೊಸಕೆರೆಹಳ್ಳಿ, ಬನಶಂಕರಿ, ಬೆಂಗಳೂರು.

*07.* ಜಂಟಿ ನಿರ್ದೇಶಕರು(ಆಡಳಿತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

*08.* ಸಹನಿರ್ದೇಶಕರು ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು.

*09.* ಇಲಾಖೆಯ ಎಲ್ಲಾ ಸಹನಿರ್ದೇಶಕರುಗಳಿಗೆ / ವಿಭಾಗೀಯ ಸಹ ನಿರ್ದೇಶಕರುಗಳಿಗೆ.

*10.* ರಾಜ್ಯದ ಎಲ್ಲಾ ಸಿ.ಟಿ.ಇ., ಮತ್ತು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳ ಪ್ರಾಂಶುಪಾಲರಿಗೆ.

*11.* ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾ.ಶಿ.ಇ., ರವರಿಗೆ ಸೂಕ್ತ ಕ್ರಮಕ್ಕಾಗಿ.

*12.* ಮುಖ್ಯ ಲೆಕ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

*13.* ಹಿ.ಸ.ನಿ., ಇ-ಆಡಳಿತ ಘಟಕ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಇಲಾಖಾ ಅಂತರ್ಜಾಲ ತಾಣದಲ್ಲಿ ಅಳವಡಿಸಲು.

*14.* ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

*15.* ಆಯುಕ್ತರ ಕಾರ್ಯಾಲಯದ ಎಲ್ಲಾ ಶಾಖಾಧಿಕಾರಿಗಳಿಗೆ/ಅಧೀಕ್ಷಕರುಗಳಿಗೆ.

ಪ್ರತಿಯನ್ನು ಮಾಹಿತಿಗಾಗಿ,

01. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ಇವರಿಗೆ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಿದೆ.
02. ಜಂಟಿ ಕಾರ್ಯದರ್ಶಿಗಳು(ಆಡಳಿತ), ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
03. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.
04. ಅಧೀನ ಕಾರ್ಯದರ್ಶಿಗಳು [ಸಾಮಾನ್ಯ] [ಪ್ರಾಥಮಿಕ] [ಪ್ರೌಢ] [ಯೋಜನೆ][ಆಡಳಿತ] ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
05. ಕಛೇರಿ ಪ್ರತಿ.

\\10.96.135.22\e\D\LALC\Session-july-2016-1.doc

ಡಾ. ಕೆ.ಜಿ. ಜಗದೀಶ, ಭಾ.ಆ.ಸೇ.,
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

Dr. K.G. JAGADEESHA, I.A.S.,
Commissioner
Department of Public Instruction

ಅ.ಸ.ಪ.ಸಂಖ್ಯೆ:ಶಾ.ಸ.ಶಾ–01/ ವಿ.ಮ.ಅ/2020/01/2019–20. ದಿನಾಂಕ:15–09–2020.

***ಮಾನ್ಯರೇ,***

**ವಿಷಯ**:- ದಿನಾಂಕ: 21-09-2020 ರಿಂದ 30-09-2020 ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನದಲ್ಲಿನ ಪ್ರಶ್ನೆಗಳಿಗೆ ಉತ್ತರಗಳನ್ನು ಸಕಾಲದಲ್ಲಿ ಕಳುಹಿಸುವ ಬಗ್ಗೆ.

**ಉಲ್ಲೇಖ**:-1. ವಿಧಾನ ಸಭೆ ಕಾರ್ಯದರ್ಶಿಯವರ ಪತ್ರ ಸಂಖ್ಯೆ ಕವಿಸಸ/ಶಾರಶಾ/18/2018-20. ದಿನಾಂಕ: 01.09.2020.
2. ವಿಧಾನ ಪರಿಷತ್ ಕಾರ್ಯದರ್ಶಿಯವರ ಪತ್ರ ಸಂಖ್ಯೆ ಕವಿಪ/ಶಾರಶಾ/38/141/ಅ/2020. ದಿನಾಂಕ: 02.09.2020.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-01 ಮತ್ತು 02 ರ ಅಧಿಸೂಚನೆಗಳಲ್ಲಿ ವಿಧಾನ ಮಂಡಲ ಅಧಿವೇಶನವು ಬೆಂಗಳೂರಿನಲ್ಲಿ ದಿನಾಂಕ: 21.09.2020 ರಿಂದ 30.09.2020 ರವರೆಗೆ ನಡೆಯಲಿರುವುದಾಗಿ ತಿಳಿಸಲಾಗಿದೆ.

ಅಧಿವೇಶನದ ಸಮಯದಲ್ಲಿ ಇಲಾಖೆಯ ಪ್ರಶ್ನೆಗಳು ಹಾಗೂ ಗಮನ ಸೆಳೆಯುವ ಸೂಚನೆಗಳಿಗೆ ಉತ್ತರವನ್ನು ತಕ್ಷಣ ನೀಡಬೇಕಾಗಿದ್ದು, ಜಿಲ್ಲೆಗಳಿಂದ ಮಾಹಿತಿಯನ್ನು ತ್ವರಿತವಾಗಿ ಪಡೆಯಬೇಕಾಗಿರುತ್ತದೆ.

ಆದ್ದರಿಂದ ನಿಮ್ಮ ವ್ಯಾಪ್ತಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ಸಲ್ಲಿಸಲು ಮಾಹಿತಿ ಕ್ರೋಢೀಕರಣ ಮಾಡಬೇಕಾಗಿರುವುದರಿಂದ ಅಧಿವೇಶನದ ಸಮಯದಲ್ಲಿ ನೀವು ಕಛೇರಿಯಲ್ಲಿದ್ದು, ಪ್ರಶ್ನೆಗಳಿಗೆ ಹಾಗೂ ಗಮನಸೆಳೆಯುವ ಸೂಚನೆಗಳಿಗೆ ಆದ್ಯ ಗಮನಹರಿಸಿ ಅತೀ ಜರೂರಾಗಿ ಉತ್ತರ ಸಲ್ಲಿಸಲು ಕ್ರಮ ವಹಿಸಬೇಕಾಗಿ ಸೂಚಿಸಿದೆ.

ತಮ್ಮ ಕಛೇರಿಯಲ್ಲಿನ ಶಿಕ್ಷಣಾಧಿಕಾರಿ ವೃಂದದ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಅದರ ಪ್ರತಿಯನ್ನು ಅವರ ಸಂಚಾರಿ ದೂರವಾಣಿ ಸಂಖ್ಯೆಯೊಂದಿಗೆ ಈ ಕಛೇರಿಗೆ adpilalccpi@gmail.com ಇ-ಮೇಲ್ ಮೂಲಕ ಸಲ್ಲಿಸುವುದು. ಮುಂದುವರೆದು ಉಪನಿರ್ದೇಶಕರು ಮತ್ತು ಅವರ ಅಧೀನ ಅಧಿಕಾರಿಗಳು ಮತ್ತು ನೌಕರರು ವಿಧಾನ ಮಂಡಲ ಅಧಿವೇಶನದ ಅವಧಿಯಲ್ಲಿ ಕೇಂದ್ರ ಸ್ಥಾನ ಬಿಡಬಾರದೆಂದು ಈ ಮೂಲಕ ಸೂಚಿಸಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

***ಇವರಿಗೆ:***
*ಶ್ರೀ* ______________,
ಉಪನಿರ್ದೇಶಕರು [ಆಡಳಿತ / ಅಭಿವೃದ್ಧಿ]
ಸಾರ್ವಜನಿಕ ಶಿಕ್ಷಣ ಇಲಾಖೆ,
______________ ಜಿಲ್ಲೆ.

New Public Offices Building, Nrupathunga Road, Bengaluru - 560 001
ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು – 560 001
Ph. No. 080-22214350 / 080-22270072, e-mail : cpibng2019@gmail.com